## ಸಾಂಗ್ಲೀ ಯಾನ

ಖಡಕ್ ಪೊಲೀಸ್ ಅಧಿಕಾರಿಯಾಗಿದ್ದ ಸಾಂಗ್ಲಿಯಾನ ಅವರ ಮೇಲೆ ಈಗಾಗಲೆ ಬಂದಿರುವ ಚಿತ್ರಗಳನ್ನು ನೋಡಿದವರಿಗೆ ಇದು ಸ್ಯಾಂಡಲ್ ವುಡ್ ನಿಂದ ಕಹಿ  ವಾರ್ತೆ. ತುಂಬಿದ ಸಭೆಯಲ್ಲಿ ಹೆಣ್ಣಿನ ದೈಹಿಕ ಸೌಂದರ್ಯ ಹೊಗಳಿದ್ದು ಮಾತ್ರವಲ್ಲ, ಗೂಂಡಾಗಳು ಕೊಲ್ಲುವುದನ್ನು ತಪ್ಪಿಸಿಕೊಳ್ಳಲು ಶರಣಾಗುವುದು ಒಳ್ಳೆಯದು ಅನ್ನುವಂತಹ ಅರಳು ಮರುಳು ಡೈಲಾಗ್ ಗಳು ಈ ಚಿತ್ರದಲ್ಲಿವೆಯಂತೆ! ನಾಯಕನ ಪಾತ್ರ ಮಾಡಲು ಕರ್ನಾಟಕದಿಂದ ಯಾವ ನಟನೂ ಮುಂದೆ ಬಾರದ ಕಾರಣ ಸಾಂಗ್ಲಿ ಯಿಂದ ಹೊಸ ನಟರನ್ನು ಕರೆಸಲಾಗಿದೆಯಂತೆ. ಅವರು ಹೆಸರೂ ಸಾಂಗ್ಲಿ ಎಂದಿರುವುದು ವಿಶೇಷ. ಚಿತ್ರ ಆಕಸ್ಮಾತ್ ಬಿಡುಗಡೆಯಾದರೆ ಧೈರ್ಯಕ್ಕೆ ಇರಲಿ ಅಂತ ಸಾಂಗ್ಲಿ ಅವರ ಮನೆಯ ಸುತ್ತ ಈಗಾಗಲೇ ೫೦೦ ಪೊಲೀಸರ ಸರ್ಪ ಕಾವಲು ಇರಿಸಲಾಗಿದೆ.





## ಭ್ರಮ್ಯಾ ಟೀಚರ್

ಸಾಮಾಜಿಕ ಜಾಲತಾಣದ ಯಶಸ್ವಿ ಟೀಚರ್ ಭ್ರಮ್ಯಾ ಅವರ ಕುರಿತಾದ ಅಪಹಾಸ್ಯಮಯ ಚಿತ್ರವಿದು. ಹಗ್ಗೇಶ್ ಅವರು ಸಂಭಾಷಣೆ ಬರೆದು ಕ್ಲಾಪರ್ ಬಾಯ್ ಗೆ ನಿರ್ದೇಶಿಸಲು ಕೊಟ್ಟ ಈ ಚಿತ್ರದ ನಾಯಕಿ ಥೇಟ್ ಸ್ಯಾಂಡಲ್‌ವುಡ್ ಸ್ಟಾರ್ ರಮ್ಯಾ ಅವರನ್ನೇ ಹೋಲುತ್ತಿರುವುದು ಚಿತ್ರದ ಬಗ್ಗೆ ಈಗಾಗಲೆ ಟ್ವಿಟ್ಟರ್‌ವಾರ್‌ಗೆ ಕಾರಣವಾಗಿದೆ. ಥಿಯೇಟರ್‌ನಲ್ಲಿ ಸಿನಿಮಾ ನೋಡಲು ನಾಯಕಿಗೆ 'ಟಿಕೆಟ್' ಸಿಗುವುದಿಲ್ಲ ಎಂದು ಭ್ರಮ್ಯಾ ಅವರಿಗೆ ಆಗದವರು ಈಗಾಗಲೆ ಅಪಪ್ರಚಾರ ನಡೆಸಿದ್ದಾರೆ.



## ಮಹಿಷಾಸೂರ್ ಹುಲಿ

ಕೇಸರಿಗಳ ಕೆಂಗಣ್ಣಿಗೆ ಮತ್ತೆ ಬೀಳಲೆಂದೇ ಕೇಪಿಶೀಶಿ ಪ್ರೊಡಕ್ಷನ್ಸ್ ಈ ಚಿತ್ರ ತೆಗೆದಿದ್ದಾರೆ. ರಾಜ್ಯದಲ್ಲಿ ಹಿಂಸೆ, ಗಲಭೆ ತಡೆಯಬಹುದು ಅನ್ನುವ ಉದ್ದೇಶದಿಂದ ಚಿತ್ರದ ಹೆಸರನ್ನು ' ಬೆಂಗಳೂರು ಹುಲಿ ' ಎಂದು ಬದಲಾಯಿಸುವಂತೆ ಸೆನ್ಸಾರ್ ಮಂಡಳಿ ಸೂಚಿಸಿದೆಯಂತೆ. ಚುನಾವಣೆಯಲ್ಲಿ ನಿದ್ರಾಮಯ್ಯ ಗೆದ್ದರೆ ಮಾತ್ರ ಈ ಚಿತ್ರ ಬಿಡುಗಡೆಯಾಗುವ ಸಂಭವವಿದೆ.




## ಜೈಲಿಗೆ ಹೋದವರು

ಇದು ಖ್ಯಾತ ವಿಲ್ಲನ್ ಪರಕಾಸ್ ರಾಜ್ ಅವರು ಚಡಿಯೂರಪ್ಪರ ಪಾತ್ರದಲ್ಲಿ ನಟಿಸಿದ ವಿಭಿನ್ನ ಚಿತ್ರ. ಕೇಪಿಶೀಶಿ ಪ್ರೊಡಕ್ಷನ್ಸ್ ಇದಕ್ಕೆ ಪರೋಕ್ಷವಾಗಿ ಹಣ ಹೂಡಿದೆ ಎನ್ನುವ ಆಪಾದನೆಗಳಿವೆ. ಈ ಚಿತ್ರ ತಪ್ಪಿ ಎಲ್ಲಾದರೂ ಬಿಡುಗಡೆಯಾದರೆ ಗೋಮೂತ್ರದಿಂದ ರಾಜ್ಯದ ಎಲ್ಲ ಥಿಯೇಟರುಗಳನ್ನೂ ಸ್ವಚ್ಛಗೊಳಿಸಲಾಗುವುದು ಎಂದು ಕೆಲವು ಸಂಘಟನೆಗಳು ಈಗಾಗಲೆ ಘೋಷಿಸಿವೆ. ಅಷ್ಟು ಪ್ರಮಾಣದ ಗೋಮೂತ್ರವನ್ನು ಬೇರೆ ದೇಶಗಳಿಂದ ಆಮದು ಮಾಡುವ ಬಗ್ಗೆಯೂ ಗುಜರಾತ್‌ನ ಕೆಲವು ಉದ್ಯಮಿಗಳು ಚರ್ಚೆ ನಡೆಸಿದ್ದಾರೆ ಎಂಬ ಸುದ್ದಿ ಬಂದಿದೆ.